1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ

ಸಿ.ಸಿ. ನಂ. 31825-2018

ಸಿಡಬ್ಲೂ - 7ಪಿಡಬ್ಲೂ-2

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರೇಮಚಂದ್ರಯ್ಯ |
| ತಂದೆಯ ಹೆಸರು | : | ಚಿಕ್ಕಹನುಮಂತಯ್ಯ |
| ವಯಸ್ಸು | : | 60 ವರ್ಷ |
| ಕೆಲಸ | : | ನಿವೃತ್ತ ಪಿ ಎಸ್ ಐ |
| ವಾಸ | : | ಮಾದನಾಯಕನಹಳ್ಳಿ, ಬೆಂಗಳೂರು |

ಸಾಕ್ಷಿಯನ್ನು ದಿನಾಂಕಃ 06-08-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ನಾನು ಜುಲೈ 2017 ರಿಂದ ಡಿಸೆಂಬರ್ 2017 ರವರೆಗೆ ವೈಯಾಲಿಕಾವಲ್ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಕೇಸಿನಲ್ಲಿ ಚಾಸಾ 1 ರವರು ಕೊಟ್ಟ ದೂರನ್ನು ಸ್ವೀಕರಿಸಿ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ರಚಿಸಿ ಅದನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಇಲಾಖಾ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ದೂರನ್ನುನೋಡಿ ಗುರುತಿಸಿದ್ದು ಅದನ್ನು ನಿಪಿ. 1 ಎಂದು ಸಾಕ್ಷಿಯ ಸಹಿಯನ್ನು ನಿಪಿ. 1 ಎ ಎಂದು, ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ.2 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2ಎ ಎಂದು ಗುರುತಿಸಲಾಯಿತು.

ನಂತರ ಮರುದಿನ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಪಂಚರಾದ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡು ಪಿರ್ಯಾದಿದಾರರು ತೋರಿಸಿದ ಕೃತ್ಯ ಸ್ಥಳವನ್ನು ಸಂಜೆ ಪರಿಶೀಲಿಸಿ ಸ್ಥಳದಲ್ಲಿ ಮಹಜರ್ ನ್ನು ಮಾಡಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3ಎ ಎಂದು ಗುರುತಿಸಲಾಯಿತು. ನಿಪಿ. 3 ರ ಕಾಲದಲ್ಲಿ ಸ್ಥಳದಿಂದ ಗಾಜಿನ ಚೂರುಗಳು, ಒಡೆದ ಇಟ್ಟಿಗೆಯ ಚೂರು ಮತ್ತು ಒಂದು ಸೋನಿ ಡಿವಿಡಿಯನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ.

ಸಾಕ್ಷಿಯು ಗಾಜಿನ ಚೂರುಗಳು, ಒಡೆದ ಇಟ್ಟಿಗೆಯ ಚೂರು ಮತ್ತು ಒಂದು ಸೋನಿ ಡಿವಿಡಿಯನ್ನು ನೋಡಿಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು. ಮಾ 1 ರಿಂದ 3 ಎಂದು ಗುರುತಿಸಲಾಯಿತು. ಈ ಬಗ್ಗೆ ಠಾಣಾ ಮಾಲುಪಟ್ಟಿಯಲ್ಲಿ ನಮೂದಿಸಿರುತ್ತೇನೆ. ಮುಂದಿನ ತನಿಖೆಗಾಗಿ ಚಾಸಾ 8 ರವರಿಗೆ ಕಡತವನ್ನು ವರ್ಗಾಯಿಸಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ಚಾಸಾ 1 ರವರು ಲಿಖಿತವಾಗಿ ದೂರು ಕೊಟ್ಟಿದ್ದರು. ದೂರನ್ನು ಬರವಣಿಗೆಯ ರೂಪದಲ್ಲಿ ಕೊಟ್ಟಿದ್ದರು. ದೂರನ್ನು ದಿ. 26-10-2017 ರಂದು ದಾಖಲಿಸಿರುತ್ತೇನೆ. ಪಂಚನಾಮೆಯನ್ನು ದಿ. 27-10-2017 ರಂದು ಬರೆದಿರುತ್ತೇನೆ. ಘಟನಾ ಸ್ಥಳ ನಮ್ಮ ಠಾಣೆಯಿಂದ ಅರ್ಧ ಕಿ.ಮೀ ದೂರದಲ್ಲಿ ಇದೆ. ದೂರು ಕೊಟ್ಟ ದಿನವೇ ಮಹಜರ್ ಬರೆಯಲು ತೊಂದರೆ ಇರಲಿಲ್ಲ ಎಂದರೆ ಕೆಲಸ ಬೇರೆ ಇತ್ತು ಎಂದು ನುಡಿಯುತ್ತಾರೆ.

ಪಂಚರಿಗೆ ನೋಟೀಸನ್ನು ಕೊಟ್ಟಿದ್ದೆ. ಮು. ಮಾ 1 ರಿಂದ 3 ರ ಚೂರುಗಳು ಬೇರೆ ಕಡೆ ಸಿಗುತ್ತವೆ ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಯಾವುದೇ ಮಹಜರ್ ನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಮೂ. ಮಾ 1 ರಿಂದ 3 ನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ